SRI M. VEERAPPA MOILY.—Speaker Sir, that goes to the very root of the question. After all it is a travel concession which is extended for the purpose and it defeats the very purpose, because compensation is not the travel concession. That goes to the different cannotation.

Kali Electric Project in North Kanara District

143. SMT. ANASUYA G. SHARMA (Ankola).—Will the Minister of State for Power be pleased to state :—

(*a*) whether it is not a fact that execution of Kali hydro-electric project in North Kanara district will yield crores of rupees to the State exchequer ;

(*b*) if so, how many crores ;

(*c*) whether the Government propose to formulate and implement major irrigation projects for removing the poverty prevailing in this district ;

(*d*) whether the Government has taken any steps to investigate the ground water resources in this district ;

(*e*) the action proposed to be taken by the Government for the development of this district ?

SRI G.H. ASWATHA REDDY (Minister of State for Power).—

(*a*) Yes.

(*b*) It is estimated that the income out of this project from generation of electricity will be approximately Rs. 32 crores per year.

(*c*) No.

(*d*) Yes.

(*e*) In addition to the district level projects, the following projects have been undertaken in this district : Western Ghat development scheme, short term development scheme under Danish Government assistance, Integrated rural development schemes (I.R.D.), small farmers development authority and employment affirmation scheme etc.,

ಶ್ರೀಮತಿ ಅನುಸೂಯ ಗಜಾನನ ಶರ್ಮ.—ನಾನು ''ಈ ಜಿಲ್ಲೆಯಲ್ಲಿಯಂ ಬಡತನವನ್ನು ನಿವಾರಿಸಲು ಸರ್ಕಾರ ಈ ಜಿಲ್ಲೆಯಲ್ಲಿ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ರೂಪಿಸಿ ಅವುಗಳನ್ನು ಕಾರ್ಯಗತ ಮಾಡಲು ಸರ್ಕಾರ ಉದ್ದೇಶಿಸಿದೆಯೆ'' ಎಂಬ ಪ್ರಶ್ನೆಗೆ ತಾವು ''ಇಲ್ಲ'' ಎಂದು ಉತ್ತರವನ್ನು ಕೊಟ್ಟಿದ್ದೀರಿ. ಆ ನಂತರ ''ಸರ್ಕಾರವು ಈ ಜಿಲ್ಲೆಯಲ್ಲಿ ಭೂಗತ ನೀರಿನ ಶೋಧನೆ ಗೋಸ್ಕರ ಕಾರ್ಯಕ್ರಮಗಳೇನಾದರೂ ಕೈಗೊಂಡಿದೆಯೇ'' ಎಂದು ಕೇಳಿದ್ದಕ್ಕೆ ಹೌದು ಎಂದು ಉತ್ತರವನ್ನು ಕೊಟ್ಟಿದ್ದೀರಿ. ಎಲ್ಲಿ ಮಾಡಿದ್ದೀರಿ, ಮತ್ತು ಏನು ಆಗಿದೆ ಎಂಬುದನ್ನು ಕೇಳುವುದಕ್ಕೆ ಬಯಸುತ್ತೇನೆ.

† ಶ್ರೀ ಜಿ. ಎಚ್. ಅಶ್ವತ್ಥ ರೆಡ್ಡಿ.—ಇಲ್ಲಿ ಮೇಜರ್ ಇರಿಗೇಷನ್ ಪ್ರಾಜೆಕ್ಟ್ ಮಾಡುವುದಕ್ಕೆ ಆಗುವುದಿಲ್ಲ. ಮಿಡಿಯಮ್ ಪ್ರಾಜೆಕ್ಟಗಳನ್ನು ಮಾಡಿದ್ದೇವೆ. ಸುಮಾರು ೯ ತಾಲ್ಲೂಕುಗಳಲ್ಲಿ ಮಾಡಿದ್ದೇವೆ. ಅವುಗಳು ಯಾವುವೆಂದರೆ, ಮುಂಡಗೋಡ್, ಹಳಿಯಾಳ್, ಹೊನ್ನಾವರ್, ಸಿದ್ದಾಪುರ್, ಶಿರಸಿ, ಕಾರವಾರ್, ಭಟ್ಕಳ್, ಎಲ್ಲಾಪುರ ಮುಂತಾದ ತಾಲ್ಲೂಕುಗಳಲ್ಲಿ ಮಿಡಿಯಮ್ ಪ್ರಾಜೆಕ್ಟ್ ಗಳನ್ನು ಮಾಡಿದ್ದೇವೆ. ಈ ಎಲ್ಲಾ ತಾಲ್ಲೂಕಿನಲ್ಲಿಯೂ ಭೂಗರ್ಭ ಶಾಸ್ತ್ರಜ್ಞರು ಸುಮಾರು ೫೩೦ ಎಂ.ಕ್ಯೂ. ವಾಟರ್ ಇದೆ ಎಂದು ಕಂಡುಹಿಡಿದಿದ್ದಾರೆ. ಅವರು ಸರ್ವೆ ಮಾಡಿದ್ದಾರೆ. ಕಾರವಾರ, ಭಟ್ಕಲ್ ಹಾಗೂ ಯಲ್ಲಾಪುರದಿಂದ ರಿಪೋರ್ಟ್ ಬಂದಿಲ್ಲ. ಅಲ್ಲಿ ಸರ್ವೆ ನಡೆಯುತ್ತಿದೆ.

ಶ್ರೀಮತಿ ಅನಸೂಯ ಗಜಾನನ ಶರ್ಮ.—ನಾನು ಈ ಜಿಲ್ಲೆಯಲ್ಲಿ ಬಡತನ ನಿವಾರಿಸಲು ಏನು ಮಾಡಿದ್ದೀರಿ ಎಂದು ಉತ್ತರ ಕೇಳಿದ್ದಕ್ಕೆ ''ಈ ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದ ಯೋಜನೆಗಳ ಜೊತೆಗೆ ಈ ಕೆಳಗೆ ಕಂಡ ಯೋಜನೆಗಳನ್ನು ತೆಗೆದುಕೊಳ್ಳಲಾಗಿದೆ'' ಎಂದು ಹೇಳಿದ್ದೀರಿ. ಹಾಗೂ ''ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು (ಐಆರ್‌ಡಿ) ಸಣ್ಣ ರೈತರ ಅಭಿವೃದ್ಧಿ ಯೋಜನೆ (ಎಸ್‌ಎಫ್‌ಡಿಎ) ಹಾಗೂ ಉದ್ಯೋಗ ಧೃಡೀಕರಣ ಯೋಜನೆ (ಈಎಎಸ್)'' ಎಂದು ಹೇಳಿದ್ದೀರಿ. ಇದರಲ್ಲಿ ನಮ್ಮ ಜಿಲ್ಲೆಗೆ ಹೊಸದಾಗಿ ಮಾಡಿದ್ದು ಯಾವುದು ಎಂದು ಕೇಳುತ್ತೇನೆ.

ಶ್ರೀ ಜಿ. ಎಚ್. ಅಶ್ವತ್ಥರೆಡ್ಡಿ.—ಐ.ಆರ್.ಡಿ. ಕೆಳಗೆ ಒಂದು ತಾಲ್ಲೂಕಿಗೆ ೫ ಲಕ್ಷ ರೂಪಾಯಿಯನ್ನು ಕೊಟ್ಟಿದ್ದೇವೆ.

ಶ್ರೀಮತಿ ಅನಸೂಯ ಗಜಾನನ ಶರ್ಮ.—ಐ. ಆರ್. ಡಿ. ಎಲ್ಲಾ ಜಿಲ್ಲೆಗಳಲ್ಲೂ ಕೂಡಾ ಮಾಡಿದ್ದೀರಿ. ನಮ್ಮ ಜಿಲ್ಲೆಗೆ ಏನಾಯಿತು ?

ಶ್ರೀ ಜಿ.ಎಚ್. ಅಶ್ವತ್ಥರೆಡ್ಡಿ —ಡ್ಯಾನಿಷ್ ಸರ್ಕಾರದ ಸಹಾಯದಿಂದ ಇಲ್ಲಿ ೩ ಕೋಟಿ ೩೦ ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ. ಇದರಲ್ಲಿ ಹೈನುಗಾರಿಕೆ, ಸಣ್ಣ ನೀರಾವರಿ ಯೋಜನೆಗಳು ಕೂಡಾ ಎಲ್ಲಾ ಸೇರಿವೆ. ಸುಮಾರು ೩ ಕೋಟಿ ೩೦ ಲಕ್ಷ ರೂಪಾಯಿಗಳನ್ನು ಕೊಡಲಾಗಿದ್ದು, ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆ ವಿಷಯದಲ್ಲಿ .....

ಶ್ರೀಮತಿ ಅನುಸೂಯ ಗಜಾನನ ಶರ್ಮ.—ಯಾವ ಯಾವುದನ್ನು ಎಲ್ಲೆಲ್ಲಿಗೆ ಕೊಟ್ಟಿದ್ದೀರಿ ?

ಶ್ರೀ ಜಿ.ಎಚ್. ಅಶ್ವತ್ಥ ರೆಡ್ಡಿ.—ತಾವು ದೊಡ್ಡ ಪ್ರಶ್ನೆಯನ್ನೇ ಕೇಳಿದ್ದೀರಿ. ಡೀಟೇಲ್ಸನ್ನು ಪ್ಲಾನಿಂಗ್ ಮಿನಿಸ್ಟರ್ ಕೊಟ್ಟಿದ್ದಾರೆ. ಪಶ್ಚಿಮ ಘಟ್ಟದ ಯೋಜನೆಯಲ್ಲಿ ಏನೇನು ಯೋಜನೆಗಳನ್ನು ತೆಗೆದುಕೊಂಡಿದ್ದೀರೆಂದು ಕೇಳಿದ್ದಾರೆ. ಅದು ಅವರಿಗೇ ಗೊತ್ತಿದೆ. ಆದರೂ ಅವರು ಕೇಳಿದ್ದಾರೆ.

ಶ್ರೀಮತಿ ಅನುಸೂಯ ಗಜಾನನ ಶರ್ಮ.—ಪಶ್ಚಿಮ ಘಟ್ಟದ ಯೋಜನೆಯಲ್ಲಿ ನಮ್ಮ ಜಿಲ್ಲೆಗೆ ಎಂದು ಸ್ಪೆಷಲ್ಲಾಗಿ ಕೊಟ್ಟಿಲ್ಲ. ಪಶ್ಚಿಮ ಘಟ್ಟದ ಯೋಜನೆ ಎಂದರೆ ಅದು ಪಾಲ್‌ಗಾಟ್‌ನಿಂದ ಹಿಡಿದು ಗೋವಾ ವರೆಗೂ ಹೋಗುತ್ತದೆ. ಕಾಳೀ ನದಿ ಯೋಜನೆ ಆಗಿದೆ. ಈ ವಿಭಾಗದಲ್ಲಿ ಮಳೆ ಹೋಗಿರುವುದರಿಂದ ರೈತರಿಗೆ ಬಹಳ ತೊಂದರೆ ಆಗಿದೆ. ೨ ವರ್ಷದಿಂದ ನಮ್ಮ ಜಿಲ್ಲೆಯಲ್ಲಿ ಮಳೆ ಹೋಗಿರುವುದರಿಂದ ಜನ ತೊಂದರೆಗೆ ಈಡಾಗಿದ್ದಾರೆ. ಪಶ್ಚಿಮ ಘಟ್ಟ ಯೋಜನೆ ಇಡೀ ಪಶ್ಚಿಮ ಘಟ್ಟಕ್ಕೆ ಬರುತ್ತದೆ. ಆದ್ದರಿಂದ ನಮ್ಮ ಜಿಲ್ಲೆಗೆ ಏನು ಮಾಡಿದ್ದೀರಿ ಎಂದು ಕೇಳುತ್ತೇನೆ.

ಶ್ರೀ ಜಿ. ಎಚ್. ಅಶ್ವತ್ಥರೆಡ್ಡಿ.—ಪಶ್ಚಿಮ ಘಟ್ಟದ ಯೋಜನೆಯಲ್ಲಿ ಕರ್ನಾಟಕದ ಕಾರವಾರ ಡಿಸ್ಟ್ರಿಕ್ಟ್ ಸೇರಿಸಿಕೊಂಡಿದೆ. ಅದು ಪಶ್ಚಿಮ ಘಟ್ಟದ ಯೋಜನೆಯಲ್ಲಿ ಬಂದಿದೆ.

ಶ್ರೀಮತಿ ಅನಸೂಯ ಗಜಾನನ ಶರ್ಮ.—ಪಶ್ಚಿಮ ಘಟ್ಟ ಎಂದರೆ ಕಾರವಾರ ಡಿಸ್ಟ್ರಿಕ್ಟ್ ಎಂದ ಹೇಳುತ್ತಿದ್ದಾರೆ. ಇದು ಪಾಲ್‌ಗಾಟ್‌ನಿಂದ ಹಿಡಿದು ಗೋವವರೆಗೂ ಹೋಗುತ್ತದೆ. ಹಾರಿಕೆಯ ಉತ್ತರ ಕೊಡುವುದು ಏಕೆ ಸ್ವಾಮಿ ?

ಶ್ರೀ ವಿ. ಎಂ. ಘಾಡಿ.—ಈ ತಾಲ್ಲೂಕುಗಳಲ್ಲಿ ಮಿಡಿಯಂ ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ಯಾವ ಯಾವುದನ್ನು ತೆಗೆದುಕೊಂಡಿದ್ದೀರಿ ? ಮತ್ತು ಎರಡನೆಯದಾಗಿ ಈ ಯೋಜನೆಯಿಂದ ೩೨ ಕೋಟಿ ರೂಪಾಯಿ ಆಗಿದೆ ಎಂದು ಹೇಳುತ್ತಿದ್ದೀರಿ. ಇದು ಮೂರು ಹಂತಗಳಲ್ಲಿ ಬರುತ್ತದೆಯೋ ಅಥವಾ ಮೊದಲನೇ ಹಂತದಲ್ಲಿ ಬರುತ್ತದೆಯೋ ?

ಶ್ರೀ ಜಿ. ಎಚ್. ಅಶ್ವತ್ಥರೆಡ್ಡಿ.—ಅಧ್ಯಕ್ಷರೇ ಇದು ನೀರಾವರಿಗೆ ಸಂಬಂಧಪಟ್ಟಿದ್ದು. ಇದರ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದರೆ ನೋಟೀಸ್ ಬೇಕಾಗುತ್ತದೆ.

ಶ್ರೀ ವೈಂಗಾವ್‌ಂಕರ್.—''ಉ'' ಪ್ರಶ್ನೆಗೆ ಮಾನ್ಯ ಮಂತ್ರಿಗಳು ಸಮಗ್ರವಾಗಿ ಉತ್ತರವನ್ನು ಕೊಟ್ಟಂತೆ ಕಾಣುತ್ತಾ ಇಲ್ಲ. ತಾವು ವಿದ್ಯುಚ್ಛಕ್ತಿ ರಾಜ್ಯ ಮಂತ್ರಿಗಳು ಇದ್ದೀರಿ. ತಾವು ವಿದ್ಯುಚ್ಛಕ್ತಿ ಮಂತ್ರಿಗಳಾಗಿ ನಿರ್ವಹಿಸತಕ್ಕ ಪಾತ್ರ ಯಾವುದು ? ಅದನ್ನಾದರೂ ಸ್ಪಷ್ಟವಾಗಿ ಹೇಳಿ ?

ಶ್ರೀ ಜಿ. ಎಚ್. ಅಶ್ವತ್ಥರೆಡ್ಡಿ.—ವಿದ್ಯುಚ್ಛಕ್ತಿ ಮಂತ್ರಿಯ ಪಾತ್ರ ಎಂದರೆ ಅಲ್ಲಿ ಸುಮಾರು ಆರೇಳು ಯೋಜನೆಗಳು ಇವೆ. ಕಾಳಿ ಸ್ಟೇಜ್ ನಂ. ೧,೨,೩ ಈ ರೀತಿ ಇದೆ. ಮತ್ತು ಬೇಡ್ತಿ ಯೋಜನೆ ಕೂಡಾ ಇದೆ.

ಶ್ರೀಮತಿ ಅನಸೂಯ ಗಜಾನನ ಶರ್ಮ.—ಬೇಡ್ತಿ ತಜ್ಞರ ಸಮಿತಿಯ ಮುಂದೆ ಇದೆ. ಅದನ್ನು ತಾವು ಹೇಳಬಾರದು.

ಶ್ರೀ ಜಿ.ಎಚ್. ಅಶ್ವತ್ಥರೆಡ್ಡಿ —ಇವತ್ತು ಅಲ್ಲಿ ಯಾವುದೇ ಯೋಜನೆಗಳು ಇರಲಿ ಅಲ್ಲಿಂದ ನಮ್ಮ ಕರ್ನಾಟಕಕ್ಕೆ ಬೇಕಾದಷ್ಟು ವಿದ್ಯುತ್ ಬರುತ್ತದೆ. ಸಂಮ್ಮನೆ ಯಾಕೆ ತೊಂದರೆ ಕೊಡುತ್ತಿದ್ದೀರಿ ?

ಶ್ರೀಮತಿ ಅನಸೂಯ ಗಜಾನನ ಶರ್ಮ.—ತೊಂದರೆ ಕೊಡುತ್ತೀರಿ ಎಂದು ಹೇಳಬಾರದು ಸ್ವಾಮಿ. ಅದು ತಪ್ಪು.

ಮಾನ್ಯ ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಈ ರೀತಿಯ ಅಭಿಪ್ರಾಯವನ್ನು ಸದಸ್ಯರಿಗೆ ಕೊಡಬಾರದು. ಅದನ್ನು ಸರ್ಕಾರ ಒಪ್ಪಿಕೊಂಡಿದೆ. ತಜ್ಞರ ಸಮಿತಿಗೆ ಅದನ್ನು ಕಳುಹಿಸಲಾಗಿದೆ. ಸದಸ್ಯರ ಬಗ್ಗೆ ಹಾಗೆ ಹೇಳುವುದು ಬೇಡ.

ಶ್ರೀ ಯು.ಬಿ. ಬೋರ್ಕರ್.—ಜಿಲ್ಲೆಯ ಇತರ ಅಭಿವೃದ್ಧಿ ಯೋಜನೆಗಳ ಬಗ್ಗೆ ಏನು ಹೇಳಿದ್ದೀರಿ ಅದು ರೂರಲ್ ಡೆವಲಪ್‌ಮೆಂಟ್ ಮಿನಿಸ್ಟ್ರಿಗೆ ಸೇರುತ್ತದೆ. ಅದನ್ನು ನೀವು ಹೇಗೆ ಸೇರಿಸಿಕೊಂಡಿದ್ದೀರಿ ಎಂದು ಶ್ರೀ ವೈಂಗಾವ್‌ಕರ್ ಅವರು ಕೇಳಿರುವುದು. ಆ ಬಗ್ಗೆ ತಾವು ಸ್ವಲ್ಪ ತಿಳಿಸುತ್ತೀರಾ ?

ಶ್ರೀ ಜಿ. ಎಚ್. ಅಶ್ವತ್ಥರೆಡ್ಡಿ.—ಪ್ರಶ್ನೆ ಕೇಳಿದ ಮೇಲೆ ಉತ್ತರ ಕೊಡಲೇಬೇಕಾಗುತ್ತದೆ. ಆದ್ದರಿಂದ ಬೇರೆಯವರಿಂದ ಮಾಹಿತಿಯನ್ನು ತರಿಸಿ ಉತ್ತರವನ್ನು ಕೊಟ್ಟಿದ್ದೇನೆ.

ಶ್ರೀಮತಿ ಅನುಸೂಯಜಿ ಶರ್ಮ.—ಮಾನ್ಯ ವಿದ್ಯುಚ್ಛಕ್ತಿ ಮಂತ್ರಿಗಳು ತಿಳಿಸಬೇಕು, ಅವರು ಈ ಡ್ಯಾಮ್ ಕಟ್ಟಿ ಎಷ್ಟು ಉತ್ಪನ್ನ ಪಡೆಯುತ್ತಿದ್ದಾರೆ ಅನ್ನುವುದನ್ನು ತಿಳಿಸಬೇಕು. ನಮ್ಮ ಜಿಲ್ಲೆಯಲ್ಲಿ ಇರತಕ್ಕಂಥಾ ರೈತರಿಗೆ ತೊಂದರೆಯಾಗುತ್ತಾ ಇದೆ. ಅವರಿಗೆ ಅನುಕೂಲ ಮಾಡಿಕೊಡುವುದಕ್ಕೆ, ಅವರ ಬಡತನವನ್ನು ನಿವಾರಣೆ ಮಾಡುವುದಕ್ಕೆ ತಾವೇನು ಕ್ರಮ ತೆಗೆದುಕೊಂಡಿದ್ದೀರಿ ಅನ್ನುವುದನ್ನು ಹೇಳಬೇಕು. ಅಷ್ಟೇ ಅಲ್ಲ ಈ ಪಶ್ಚಿಮ ಘಟ್ಟದ ಅಭಿವೃದ್ಧಿ ಯೋಜನೆ ಏನು ಇದೆ ಅದನ್ನು ನೀವು ನಮಗೇನೇ ತೆಗೆದುಕೊಂಡು ಸ್ಪೆಷಲ್ ಆಗಿ ಮಾಡಲಿಲ್ಲ. ಆ ರೈತರ ಬಗ್ಗೆ ಅವರ ಬಡತನವನ್ನು ನಿವಾರಿಸುವುದಕ್ಕೆ ತಾವೇನು ಕ್ರಮ ತೆಗೆದುಕೊಂಡಿದ್ದೀರಿ ಅನ್ನುವುದನ್ನು ಹೇಳಬೇಕು.

ಅಧ್ಯಕ್ಷರೇ, ಎರಡನೆಯದಾಗಿ ಮಾನ್ಯ ಮಂತ್ರಿಗಳು ಈ ಬೇಡ್ತಿ ಯೋಜನೆ ಬಗ್ಗೆ ನನ್ನನ್ನು ತೊಂದರೆ ಕೊಡುತ್ತಿದ್ದಾರೆ ಎಂದು ಮೊದಲ ಉತ್ತರದಲ್ಲಿ ಹೇಳಿದ್ದಾರೆ. ಮಾನ್ಯ ಮಂತ್ರಿಗಳು ಆರೀತಿ ಮಾತನಾಡಬಾರದು. ಈಗ ರೈತರಿಗೆ ಇರತಕ್ಕಂಥಾ ಕಷ್ಟವನ್ನು ಪರಿಹಾರ ಮಾಡುವುದಕ್ಕೆ ಯಾವ ಯೋಜನೆ ಮಾಡುತ್ತೀರಿ ಅನ್ನುವುದನ್ನು ಹೇಳಬೇಕು.

ಶ್ರೀ ಜಿ. ಹೆಚ್. ಅಶ್ವತ್ಥರೆಡ್ಡಿ,—ತಮ್ಮ ಜಿಲ್ಲೆಯ ಅಭಿವೃದ್ಧಿಗಾಗಿ ಆ ರೈತರ ಒಂದು ಕಷ್ಟವನ್ನು ಪರಿಹಾರ ಮಾಡುವುದಕ್ಕೆ ನಾವೇನು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಅನ್ನುವುದನ್ನು ಈ ಪ್ರಶ್ನೆಯ (ಉ) ಗೆ ಉತ್ತರವಾಗಿ ಹೇಳಿದೆ.

ಶ್ರೀಮತಿ ಅನುಸೂಯಜಿ ಶರ್ಮ.—ಆ ಯೋಜನೆ ನಮ್ಮ ಜಿಲ್ಲೆಗೆ ಸಂಬಂಧಪಟ್ಟದ್ದಲ್ಲ. ಅದರಿಂದ ನಷ್ಟಂಗೇನಾದರೂ ಸಿಗಬೇಕಾದರೆ ಎಲ್ಲಾ ಆಗಿ ಕೊನೆಗೆ ಬರುತ್ತದೆ.

ಶ್ರೀ ಜಿ. ಹೆಚ್. ಅಶ್ವತ್ಥರೆಡ್ಡಿ.—ಅಧ್ಯಕ್ಷರೇ, ಆ ಜಿಲ್ಲೆಯಲ್ಲಿ ಏನೇನು ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಳ್ಳಬೇಕೆಂದು ಮಾಡಿದ್ದೇವೋ ಅದೆಲ್ಲಾ ಆಲ್ಲಿಗೂ ಬರುತ್ತದೆ. ಈ ಪ್ರಶ್ನೆ ಜನವರಿ ತಿಂಗಳಿನಲ್ಲಿ ಬಂದಿದೆ. ಆವರು ಈ ಬಗ್ಗೆ ಏನು ಪ್ರಶ್ನೆ ಕೇಳಿದ್ದಾರೋ ಅದಕ್ಕೆ ತಕ್ಕ ಉತ್ತರವನ್ನು ಅದರಲ್ಲಿ ಕೊಡ ಲಾಗಿದೆ.

Demolition of building by P.W.D.

407. SRI K. RAMBHAT (Puttur).—Will the Minister for Public Works be pleased to state.—

(a) whether it is a fact that the building of a businessman, Sri Vittal Baliga in which he was running a business was demolished by the P. W. D, authorities at Puttur ;

(b) the number of applications submitted by the said Sri Vittal Baliga to the Government requesting for redressal of the injustice caused to him ;

(c) action taken by the Government on the representation submitted by the said Sri Vittal Baliga to His Excellency the Governor of Karnataka which was forwarded to the Commissioner for Public Works Department ?

SRI KAGODU THIMMAPPA (Minister for Public Works).—

(a) It is not true.

(b) So far, 31 representations have been received (upto 22-7-1980).

(c) When the representations dated 5-1-1978, 22-2-1978 and 1-4-1978 submitted to the Governor by Sri Vittal Baliga were under the consideration of Government, Shri Vittal Baliga has submitted representation to the Shah Commission which was constituted for examining the Emergency excesses, the said application was forwarded to the Divisional Commissioner of Mysore who was the Enquiry Officer of that Commission. The said Enquiry Officer of the Commission has completed his enquiry and found that no excess has been committed in respect of Shri Vittal Baliga as represented by him during the Emergency period and accordingly, the Enquiry Officer has passed orders. The same has been intimated to the said Shri Vittal Baliga in Government letter No. P. W. D. 272 CRR 77 (part file), dated 17-3-1977 and even No. dated 3-8-1978, 4-12-1979 and 19-6-1980.

ಶ್ರೀ. ಕೆ. ರಾಮಂಭಟ್.—ಸ್ವಾಮಿ, ತುರ್ತು ಪರಿಸ್ಥಿತಿ ಕಾಲದಲ್ಲಿ ಅಂದರೆ ೧೯೭೫-೭೬ರಲ್ಲಿ ಪುತ್ತೂರಿನ ವ್ಯಾಪಾರಿಯೊಬ್ಬರ ಕಟ್ಟಡವನ್ನು ಪಿ.ಡಬ್ಲ್ಯೂ.ಡಿ. ಯವರು ಕೆಡಿಸಿ ನಾಶ ಮಾಡಿರುವುದು ನಿಜವೆ ?

† ಶ್ರೀ ಕಾಗೋಡು ತಿಮ್ಮಪ್ಪ.—ನಿಜವಲ್ಲ.